ಮತ್ತೆ ಮಾನ್ಯ ಶಾಸಕರು ಹೇಳಿದ ದೇವಸ್ಥಾನಕ್ಕೆ ವಿದ್ಯುತ್ ಕೊಡುವ ವಿಚಾರದಲ್ಲಿ ಸಂಬಂಧಪಟ್ಟ ಕಡತಗಳನ್ನು ತರಿಸಿ ಪರಿಶೀಲನೆ ಮಾಡಿ ಶಾಸಕರ ಜೊತೆಗೆ ಚರ್ಚೆ ಮಾಡಿ ಸಮಸ್ಯೆಗೆ ಪರಿಹಾರ ಮಾಡುತ್ತೇವೆ.

## Facilities for eye cancer patints
**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 11 (28)**

**ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ)**

ಅ) ಕಡುಬಡವರ ಮಕ್ಕಳು ಕಣ್ಣಿನ ಕ್ಯಾನ್ಸರ್‌ನಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದೇಶದಿಂದ ತರಬೇತಿ ಪಡೆದ ಚಿಕಿತ್ಸಕರ ಮೂಲಕ ನಾರಾಯಣ ನೇತ್ರಾಲಯವು ಉಚಿತ ಶಸ್ತ್ರ ಚಿಕಿತ್ಸೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರಾಜ್ಯದ ದೂರದ ಪ್ರದೇಶಗಳಿಂದ ಈ ಚಿಕಿತ್ಸೆಗೆ ಬರುವ ಕಡುಬಡವರಿಗೆ ಪ್ರಯಾಣದ ಖರ್ಚನ್ನು ಭರಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಬಂದಿದೆ.

ಆ) ಹೌದು.

ಇ) ತೀವ್ರತರ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಮಾತ್ರ ಸರ್ಕಾರದ ವತಿಯಿಂದ Integrated Diseases Surveillance Project ಕಾರ್ಯಕ್ರಮದಡಿಯಲ್ಲಿ ರೋಗಿಗಳಿಗೆ ಪ್ರಯಾಣದವರನ್ನು ಟಿಕೆಟ್ ಸಲ್ಲಿಸುವುದರ ಮೂಲಕ ವಾಪಸ್ಸು ಪಡೆಯಲು ಅವಕಾಶವಿರುತ್ತದೆ.

**ಶ್ರೀ ಶ್ರೀಕಾಂತ ಎಸ್. ಕುಲಕರ್ಣಿ:** ಮಾನ್ಯ ಮಂತ್ರಿಗಳು ಉತ್ತರ ಒದಗಿಸಿದ್ದಾರೆ. ಇಲ್ಲಿ ಪ್ರಸ್ತಾಪ ಮಾಡಿದ ವಿಷಯ ಅತ್ಯಂತ ಭಯಾನಕ ರೋಗವಾದ ಕಣ್ಣಿನ ಕ್ಯಾನ್ಸರ್ ಬಗ್ಗೆ. ಅದರಲ್ಲೂ ಕಡುಬಡವರ ಮಕ್ಕಳಿಗೆ ವಿಶೇಷವಾದ ಕ್ಯಾನ್ಸರ್ ರೋಗ ಏನು ಬರುತ್ತದೆ, ಇದಕ್ಕೆ ಚಿಕಿತ್ಸೆಗಾಗಿ ಕರ್ನಾಟಕ ಅತ್ಯಂತ ಜನಪ್ರಿಯವಾದ ಆಸ್ಪತ್ರೆ ನಾರಾಯಣ ನೇತ್ರಾಲಯದವರು ಉಚಿತವಾಗಿ ಚಿಕಿತ್ಸೆ ಮಾಡಬೇಕೆನ್ನುವ ನಿರ್ಣಯ ತೆಗೆದಕೊಂಡು, ಸಾಮಾನ್ಯ ಬಡವರಿಗೆ ದೂರದಿಂದ ಬರುವಂಥ ಬಡವರಿಗೆ ಚಿಕಿತ್ಸೆ ಉಚಿತವಾಗಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾರಾಯಣ ನೇತ್ರಾಲಯದವರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಜನವರಿ 28 ರಂದು ಪತ್ರ ಬರೆದು ಈ ಕಡುಬಡವರು ಬೆಂಗಳೂರಿಗೆ ದೂರದ ಬೇರೆ ಬೇರೆ ಭಾಗಗಳಿಂದ ಬರಬೇಕಾದರೆ ಸಾಕಷ್ಟು ಹಣ ಖರ್ಚಾಗುತ್ತದೆ. ಒಂದು ಸಲ, ಎರಡು ಸಲ ಚಿಕಿತ್ಸೆಗೆಂದು ಬಂದರೆ ಅದು ಸಂಪೂರ್ಣವಾಗುವುದಿಲ್ಲ. ವಾರಕ್ಕೊಮ್ಮೆ ತಿಂಗಳಿಗೊಮ್ಮೆ ಬರುವಂಥ ಸಂದರ್ಭ ಬರುತ್ತದೆ. ಹೀಗಾಗಿ ಯಾರಿಗೆ ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವೇ ಇಲ್ಲ ಅಂಥ ಕಡುಬಡವರ ಮಕ್ಕಳಿಗೆ ಬೆಂಗಳೂರಿನಲ್ಲಿರುವ ನಾರಾಯಣ ನೇತ್ರಾಲಯಕ್ಕೆ ಬಂದು ಚಿಕಿತ್ಸೆ ಕೊಡಿಸುವ ದೃಷ್ಟಿಯಿಂದ ಅವರಿಗೆ ಪ್ರಯಾಣದ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಅದು ರೋಗಿಯೊಬ್ಬರಿಗೆ ಮಾತ್ರವಲ್ಲ 1+1 ಎನ್ನುವಂತೆ, ಸಣ್ಣ ಮಕ್ಕಳು ಇರುವುದರಿಂದ ರೋಗಿಯ ಜೊತೆಗೆ ತಾಯಿ ಅಥವಾ ತಂದೆ ಅಥವಾ ಪೋಷಕರು ಯಾರಾದರೂ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎನ್ನುವ ರೀತಿಯಲ್ಲಿ, ನಾನು ಮಂತ್ರಿಗಳಲ್ಲಿ ವಿನಂತಿಸುತ್ತೇನೆ, ಆ ರೀತಿ ಕಡುಬಡವರ ಮಕ್ಕಳನ್ನು ಗುರುತಿಸಿ ಅವರಿಗೆ ಒಂದು Certificate ಕೊಟ್ಟು ಅವರಿಗೆ ವ್ಯವಸ್ಥೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಇದನ್ನು ಅವರು ಮಾಡಬಹುದು ಎನ್ನುವ ಪ್ರಶ್ನೆ ಕೇಳುತ್ತೇನೆ.

**ಶ್ರೀಅರವಿಂದ ಲಿಂಬಾವಳಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಕಾಂತ

ಕುಲಕರ್ಣಿಯವರು ಮಕ್ಕಳ ಕಣ್ಣಿನ ಕ್ಯಾನ್ಸರ್ retina plasma ಎನ್ನುವ ಖಾಯಿಲೆ ಏನು ಬರುತ್ತದೆ, ಈ ಖಾಯಿಲೆಗೋಸ್ಕರ ಬೆಂಗಳೂರಿನ ನಾರಾಯಣ ನೇತ್ರಾಲಯ ಅದಲ್ಲದೆ ಶಂಕರ್ ಕಣ್ಣಿನ ಆಸ್ಪತ್ರೆ, ವಿಠಲ ಕಣ್ಣಿನ ಆಸ್ಪತ್ರೆ ಇಲ್ಲಿ ಕೂಡ ಉಚಿತವಾದ ಚಿಕಿತ್ಸೆ ದೊರೆಯುತ್ತಿದೆ. ತೀವ್ರವಾದಂಥ ಸಮಸ್ಯೆ ಎದುರಿಸತಕ್ಕಂಥವರಿಗೆ integrated Diseases Surveillance Project ಅಡಿಯಲ್ಲಿ ಪ್ರಯಾಣದರ ಒದಗಿಸುತ್ತಿದ್ದೇವೆ. ಅಷ್ಟೆ ಅಲ್ಲದೆ ತಮಗೆ ಗೊತ್ತಿರುವಂತೆ, ಹೊಸ ಯೋಜನೆಯಾದ ವಾಜಪೇಯಿ ಆರೋಗ್ಯ ಶ್ರೀ ಯಲ್ಲಿಯಾ ಕೂಡ ಕ್ಯಾನ್ಸರ್ ಖಾಯಿಲೆಗೆ ಸಂಬಂಧಪಟ್ಟಂಥ treatment ದೊರೆಯುತ್ತದೆ. ಅವರು ಹೇಳಿರುವ ವಿಷಯವನ್ನು ಪರಿಗಣನೆಗೆ ತೆಗೆದುಕೊಂಡು, ಅದರಡಿಯಲ್ಲಿಯೂ ಆ ರೀತಿಯ ತೊಂದರೆಗಳು, ತೀರ್ವವಾದಂಥವರಿಗೆ ಮಾತ್ರ Integrated Diseases Surveillance Project ಅಡಿಯಲ್ಲಿ ಬರುತ್ತದೆ. otherwise ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಲ್ಲಿ ಇದನ್ನು cover ಮಾಡುತ್ತೇವೆ. ಆ ರೀತಿಯಾದ ಯಾವುದೇ ತೊಂದರೆಗಳು ಅವರ ಗಮನಕ್ಕೆ ಬಂದಿದ್ದರೆ ದಯವಿಟ್ಟು ನಮ್ಮ ಗಮನಕ್ಕೆ ತಂದರೆ ನಮ್ಮಿಂದ ಅದನ್ನು ಸರಿಪಡಿಸುವಂಥ ಕೆಲಸ ಮಾಡಲಾಗುವುದು.

**ಶ್ರೀ ಯು.ಟಿ.ಖಾದರ್** : ಮಾನ್ಯ ಅಧ್ಯಕ್ಷರೆ, ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಡಿಯಲ್ಲಿ....

**ಅಧ್ಯಕ್ಷರು** : Please ಅವರು ಮೊದಲು ಕೇಳಲಿ, ವಾಜಪೇಯಿ ಆರೋಗ್ಯ ಶ್ರೀ ಯೋಜನೆಯ ಪ್ರಶ್ನೆ ಕೇಳಲಿಲ್ಲ.

**ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ** : ಈಗಾಗಲೇ ಕೇಂದ್ರ ಸರ್ಕಾರ ರೈಲ್ವೆ ಇಲಾಖೆಯ ಮೂಲಕ ಇವರಿಗೆ ಪ್ರಯಾಣ ಮಾಡಲಿಕ್ಕೆ Concession ಕೊಡುವ ತರಹ, ಈ ಯೋಜನೆಯ ಮೇಲೆ ರೋಗಿಗಳು ಪ್ರಯಾಣ ದರದ ಟಿಕೆಟ್. ಸಲ್ಲಿಸುವ ಮೂಲಕ ತೆಗೆದುಕೊಳ್ಳಬೇಕೆಂದು ತಾವು ಏನು ಉತ್ತರ ಕೊಟ್ಟಿದ್ದೀರಿ, ಬಹುಶಃ ಇದನ್ನು ಸರಳೀಕರಣ ಮಾಡಿ ಅವರಿಗೆ ನೇರವಾಗಿ Concession Certificate ಕೊಟ್ಟು ಬಿಟ್ಟರೆ

ಅವರೊಬ್ಬರು ತಮ್ಮ ಪೋಷಕರನ್ನು ಕರೆದುಕೊಂಡು ಆಸ್ಪತ್ರೆಗೆ ಬೆಂಗಳೂರಿಗೆ ಬಂದು ಹೋಗಲಿಕ್ಕೆ ಅನುಕೂಲವಾಗುತ್ತದೆ. ಆ ಹಿನ್ನೆಲೆಯಲ್ಲಿ ಸ್ವಲ್ಪ ಸರಳೀಕರಣ ಮಾಡಬಹುದೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಎಲ್ಲಾ ವಿಚಾರವನ್ನು ಹೇಳಿದ್ದೇನೆ. ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಲ್ಲಿ ನೀವು ಹೇಳಿರತಕ್ಕಂಥ ಸಂಗತಿಗಳಿವೆ. ಈಗಾಗಲೇ ಅದು ಸರಳೀಕರಣಗೊಂಡಿದೆ. ಇನ್ನು ಏನಾದರೂ ಸಮಸ್ಯೆ ಇದ್ದರೆ ದಯವಿಟ್ಟು ನಮ್ಮ ಗಮನಕ್ಕೆ ತಂದರೆ ಅವರಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಎಂಡೋಸಲ್ಫಾನ್ ಪೀಡಿತರ ಪುನರ್ವಸತಿ**
**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 12 (19)**

**ಶ್ರೀ ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ)**

ಅ) ರಾಜ್ಯದಲ್ಲಿರುವ ಎಂಡೋಸಲ್ಫಾನ್ ಪೀಡಿತರ ಸಮೀಕ್ಷೆಯು ಯಾವ ಹಂತದಲ್ಲಿದೆ; ಸಮೀಕ್ಷೆಯ ಪ್ರಕಾರ ಎಂಡೋಸಲ್ಫಾನ್ ಪೀಡಿತರ ಸಂಖ್ಯೆ ಎಷ್ಟು;

ಆ) ಎಂಡೋಸಲ್ಫಾನ್ ಪೀಡಿತರಲ್ಲಿ 0–10 ವರ್ಷ 10–20 ವರ್ಷ 20–30 ವರ್ಷ ಹಾಗೂ 30 ವರ್ಷಕ್ಕಿಂತ ಮೇಲ್ಪಟ್ಟವರೆಷ್ಟು; (ವಿವರಗಳನ್ನು ನೀಡುವುದು) ಪೀಡಿತರಲ್ಲಿ ಗಂಡು ಹಾಗೂ ಹೆಂಗಸರ ಸಂಖ್ಯೆಯನ್ನು ತಿಳಿಸುವುದು.

ಇ) ಎಂಡೋಸಲ್ಫಾನ್ ಪೀಡಿತರ ಪ್ರದೇಶದಲ್ಲಿ ಹಾಲಿ ಎಷ್ಟು ಸರ್ಕಾರಿ ಆಸ್ಪತ್ರೆಗಳಿವೆ; ಪೀಡಿತರ ಅನುಕೂಲಕ್ಕಾಗಿ ಹೆಚ್ಚುವರಿ ಆಸ್ಪತ್ರೆಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ವಿವರ ನೀಡುವುದು)